# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಮೆ: ಟ್ರ್ಯಾನ್ಸ್ಯಾಕ್ಟ್ ಬಿ.ಪಿ.ಓ.ಸರ್ವೀಸಸ್ ಇಂಡಿಯಾ ಪ್ರೈವೇಟ್ ಲಿ.ಇವರು ಟೆಂಡರ್ ಪ್ರಕ್ರಿಯೆಯಲ್ಲಿ ಏಕೈಕ ಬಿಡ್ದುದಾರರಾಗಿರುವ ಹಿನ್ನೆಲೆಯಲ್ಲಿ ಸಮಾಲೋಚನಾ ಸಮಿತಿಯನ್ನು ರಚಿಸುವ ಬಗ್ಗೆ

ಓದಲಾಗಿದೆ :

1 ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 20 ಇಕಾಅ 2012.ದಿನಾಂಕ:06.03.2012

2 ಮೆ: ಟ್ರ್ಯಾನ್ಸ್ಯಾಕ್ಟ ಬಿ.ಪಿ.ಓ.ಸರ್ವೀಸಸ್ ಇಂಡಿಯಾ ಪ್ರೈವೇಟ್ ಲಿ. ಬೆಂಗಳೂರು ಇವರೊಂದಿಗೆ ಮಾಡಿಕೊಂಡಿರುವ ದಿನಾಂಕ: 03-06-2017ರ ಒಡಂಬಡಿಕೆ.

3 ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 285 ವೆಚ್ಚ-12/18, ದಿನಾಂಕ:26-02-2018

4 ಟೆಂಡರ್ ಅಧಿಸೂಚನೆ ಸಂಖ್ಯೆ : ಸಿಆಸುಇ 203 ನಾಸೇಖಾ 2017, ದಿನಾಂಕ: 09-03-2018

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ನ್ನು ಅನುಷ್ಠಾನಗೊಳಿಸಲು ಸಕಾಲ ಮಂಡಳಿಯನ್ನು ಮಿಷನ್ ಮೋಡ್‌ನಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ರಚಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (2)ರ ಒಡಂಬಡಿಕೆಯಲ್ಲಿ ಸಕಾಲ ಸೇವೆಗಳನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸುವ ನಿಟ್ಟಿನಲ್ಲಿ ಮೆ: ಟ್ರ್ಯಾನ್ಸ್ಯಾಕ್ಟ್ ಬಿ.ಪಿ.ಓ.ಸರ್ವೀಸಸ್ ಇಂಡಿಯಾ ಪ್ರೈವೇಟ್ ಲಿ., 85/5, 3ನೇ ಮಹಡಿ, ವಿ.ವಿ. ಯೋಗಸೌರಭ, ಎಸ್.ಸಿ ರಸ್ತೆ, ಯಶವಂತಪುರ, ಬೆಂಗಳೂರು ಇವರೊಂದಿಗೆ ಒಡಂಬಡಿಕೆಯನ್ನು (Memorandum of Understanding) ಮಾಡಿಕೊಂಡು ಕೆ.ಜಿ.ಎಸ್.ಸಿ ಕರೆ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಮೇಲೆ ಓದಲಾದ(3)ರ ಅಧಿಸೂಚನೆಯಲ್ಲಿ ಸಕಾಲ ಕರೆ ಕೇಂದ್ರ ನಿರ್ವಹಣೆಗೆ ಮೆ: Transact BPO Services India Pvt Ltd. ಸೇವೆಯನ್ನು ನಾಲ್ಕು ತಿಂಗಳ ಅವಧಿಗೆ ರೂ. 12.00 ಲಕ್ಷಗಳ ವೆಚ್ಚದಲ್ಲಿ ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ –1999 ರ 4(ಜಿ)ರಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ (ಇ-ಆಡಳಿತ) ಪಾರದರ್ಶಕತೆ ಕಾಯಿದೆಯಿಂದ ವಿನಾಯಿತಿ ನೀಡಲಾಗಿದೆ.

--2--

ಮೇಲೆ (4)ರಲ್ಲಿ ಓದಲಾದ ಟೆಂಡರ್ ಅಧಿಸೂಚನೆಯಲ್ಲಿ ಸಕಾಲ ಕರೆ ಕೇಂದ್ರದ ಸೇವೆಯನ್ನು ನೀಡಲು ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ತಾಂತ್ರಿಕ ಮತ್ತು ಹಣಕಾಸಿನ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಸದರಿ ಪ್ರಕ್ರಿಯೆಯಲ್ಲಿ ಮೆ:Transact BPO Services India Pvt Ltd. ಏಕೈಕ ಸಂಸ್ಥೆಯು ತಾಂತ್ರಿಕ ಮತ್ತು ಹಣಕಾಸಿನ ಬಿಡ್ಡುಗಳನ್ನು ಸಲ್ಲಿಸಿದ್ದು, ಕರೆ ಕೇಂದ್ರದ ಈ ಕೆಳಕಂಡ ಕೋಷ್ಟಕ- 1ರಲ್ಲಿರುವ ಅಂಶಗಳ ಸೂಕ್ತ ಪರಿಶೀಲನೆಗಾಗಿ ಕೋಷ್ಟಕ-2ರಲ್ಲಿರುವಂತೆ ಸಮಾಲೋಚನೆ ಸಮಿತಿಯನ್ನು (Negotiation Committee) ಈ ಕೆಳಕಂಡ ಅಧಿಕಾರಿ/ಸಿಬ್ಬಂಧಿಗಳೊಂದಿಗೆ ರಚಿಸಲು ಸರ್ಕಾರವು ತೀರ್ಮಾನಿಸಿದೆ.

**ಕೋಷ್ಟಕ – 1**

| ಕ್ರಮ.ಸಂಖ್ಯೆ | ಪರಿಶೀಲನಾ ಅಂಶಗಳು |
|---|---|
| 1 | ಗುತ್ತಿಗೆದಾರರು ಸಲ್ಲಿಸಿರುವ ಟೆಂಡರ್ ದರ ಸಂದಾನ ಮಾಡುವುದು (To negotiate the price quoted by bidder) |
| 2 | ಕರ್ನಾಟಕದಲ್ಲೆಡೆ ಒಂದೇ ದೂರವಾಣಿ ಸಂಖ್ಯೆ (Unique Phone number common across the state of Karnataka) |
| 3 | ಕಾಲೋಚಿತ ಮಾಹಿತ ಒದಗಿಸುವಿಕೆ /ಸರ್ಕಾರದಿಂದ ನಾಗರೀಕರಿಗೆ ಸೇವೆಗಳು (Timely access to information/G2C Services) |
| 4 | ಸ್ಥಳೀಯ ಭಾಷಾ ಸಾಮರ್ಥ್ಯ (Local Language capability) |
| 5 | ದೂರುಗಳ ನಿರ್ವಹಣೆ (Grievance handling) |
| 6 | ಸೇವೆಗಳ ಗುರುತನ್ನು ಅನುಸರಿಸುವ ಮಾಹಿತಿ (Tracking) ನೀಡುವುದು (Provide service tracking information) |

**ಕೋಷ್ಟಕ – 2**

| ಕ್ರಮ ಸಂಖ್ಯೆ | ಹುದ್ದೆ |
|---|---|
| 1 | ಆಡಳಿತಾಧಿಕಾರಿ, ಸಕಾಲ ಮಿಷನ್ |
| 2 | ಸಹಾಯಕ ನಿರ್ದೇಶಕರು, ಇ ಡಿ ಸಿ ಎಸ್ |
| 3 | ಹೆಚ್ಚುವರಿ ನಿರ್ವಹಣಾ ಸಮಾಲೋಚಕರು --3-- |

ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 204 ನಾಸೇಖಾ 2017**

**ಬೆಂಗಳೂರು, ದಿನಾಂಕ: 14-05-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಹಾಗೂ (ತಿದ್ದುಪಡಿ) ಅಧಿನಿಯಮ, 2014ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕರೆ ಕೇಂದ್ರವನ್ನು ಆಯ್ಕೆ ಮಾಡಲು ಆಹ್ವಾನಿಸಲಾದ ಟೆಂಡರ್ ನಲ್ಲಿ ಮೆ: Transact BPO Services India Pvt Ltd ಏಕೈಕ ಸಂಸ್ಥೆಯು ಭಾಗವಹಿಸಿ ತಾಂತ್ರಿಕ ಮತ್ತು ಹಣಕಾಸಿನ ಬಿಡ್ಡುಗಳನ್ನು ಸಲ್ಲಿಸಿರುವ ಕಾರಣ ಈ ಕೆಳಕಂಡ ಕೋಷ್ಟಕ- 1ರಲ್ಲಿರುವ ಅಂಶಗಳ ಸೂಕ್ತ ಪರಿಶೀಲನೆಗಾಗಿ ಕೋಷ್ಟಕ-2ರಲ್ಲಿರುವಂತೆ ಸಮಾಲೋಚನೆ ಸಮಿತಿಯನ್ನು (Negotiation Committee) ಈ ಕೆಳಕಂಡ ಅಧಿಕಾರಿ/ಸಿಬ್ಬಂಧಿಗಳೊಂದಿಗೆ ರಚಿಸಿ ಆದೇಶಿಸಿದೆ.

**ಕೋಷ್ಟಕ – 1**

| ಕ್ರಮ.ಸಂಖ್ಯೆ | ಪರಿಶೀಲನಾ ಅಂಶಗಳು |
|---|---|
| 1 | ಗುತ್ತಿಗೆದಾರರು ಸಲ್ಲಿಸಿರುವ ಟೆಂಡರ್ ದರ ಸಂದಾನ ಮಾಡುವುದು (To negotiate the price quoted by bidder) |
| 2 | ಕರ್ನಾಟಕದಲ್ಲೆಡೆ ಒಂದೇ ದೂರವಾಣಿ ಸಂಖ್ಯೆ (Unique Phone number common across the state of Karnataka) |
| 3 | ಕಾಲೋಚಿತ ಮಾಹಿತಿ ಒದಗಿಸುವಿಕೆ /ಸರ್ಕಾರದಿಂದ ನಾಗರೀಕರಿಗೆ ಸೇವೆಗಳು (Timely access to information/G2C Services) |
| 4 | ಸ್ಥಳೀಯ ಭಾಷಾ ಸಾಮರ್ಥ್ಯ (Local Language capability) |
| 5 | ದೂರುಗಳ ನಿರ್ವಹಣೆ (Grievance handling) |
| 6 | ಸೇವೆಗಳ ಗುರುತನ್ನು ಅನುಸರಿಸುವ ಮಾಹಿತಿ (Tracking) ನೀಡುವುದು (Provide service tracking information) |

--4--

ಕೋಷ್ಟಕ – 2

| ಕ್ರಮ ಸಂಖ್ಯೆ | ಹುದ್ದೆ |
|---|---|
| 1 | ಆಡಳಿತಾಧಿಕಾರಿ, ಸಕಾಲ ಮಿಷನ್ |
| 2 | ಸಹಾಯಕ ನಿರ್ದೇಶಕರು, ಇ ಡಿ ಸಿ ಎಸ್ |
| 3 | ಹೆಚ್ಚುವರಿ ನಿರ್ವಹಣಾ ಸಮಾಲೋಚಕರು, ಸಕಾಲ ಮಿಷನ್ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಾ. ಸುನಿಲ್ ಪವಾರ್)
ಅಪರ ಮಿಷನ್ ನಿರ್ದೇಶಕರು,
ಸಕಾಲ ಮಿಷನ್,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)

ಇವರಿಗೆ:

01 ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ) / (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
02 Transact BPO Services India Pvt Ltd, 85/5, ವಿ.ವಿ. ಯೋಗಸೌರಭ, ಎಸ್.ಸಿ ರೋಡ್, ಯಶವಂತಪುರ, ಬೆಂಗಳೂರು –52.
03 ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ಸಂಗ್ರಹಣಾ ಕೋಶ), ವಿಧಾನಸೌಧ.
04 ಆಡಳಿತಾಧಿಕಾರಿ, ಸಕಾಲ ಮಿಷನ್
05 ಸಹಾಯಕ ನಿರ್ದೇಶಕರು, ಇ ಡಿ ಸಿ ಎಸ್
06 ಹೆಚ್ಚುವರಿ ನಿರ್ವಹಣಾ ಸಮಾಲೋಚಕರು, ಸಕಾಲ ಮಿಷನ್,
07 ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಮಾಹಿತಿಗಾಗಿ ಪ್ರತಿ:

1) ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ (ಇ–ಆಡಳಿತ)ಹಾಗೂ ಮಿಷನ್ ನಿರ್ದೇಶಕರು, ಸಕಾಲ ಮಿಷನ್ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ,
2) ಅಪರ ಮಿಷನ್ ನಿರ್ದೇಶಕರು, ಸಕಾಲ ಮಿಷನ್ ಇವರ ಆಪ್ತ ಸಹಾಯಕಿ